**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ</u>**
**<u>ಹಾಗೂ ವಿಶೇಷ ನ್ಯಾಯಾಧೀಶರು (ಎನ್ ಡಿ ಪಿ ಎಸ್), ದಾವಣಗೆರೆ.</u>**

**<u>ವಿಶೇಷ ಪ್ರಕರಣ (ಎನ್‌ಡಿಪಿಎಸ್) ಸಂಖ್ಯೆಃ 5/2020</u>**

**<u>ಫಿರ್ಯಾದುದಾರರುಃ</u>** ಕರ್ನಾಟಕ ಸರ್ಕಾರದ ಪರವಾಗಿ,
ವಿದ್ಯಾನಗರ ಪೋಲೀಸ್ ಠಾಣೆ, ದಾವಣಗೆರೆ.

**-ವಿರುದ್ಧ-**

**<u>ಆರೋಪಿತರುಃ-</u>** ರಮೇಶ್ ಹೆಚ್ ತಂದೆ ಹನುಮಂತಪ್ಪ
ಮತ್ತು ಇನ್ನೊಬ್ಬರು.

. . . . .

**<u>-ದೋಷಾರೋಪಣೆ-</u>**

ಶ್ರೀಮತಿ ರಾಜೇಶ್ವರಿ ಎನ್. ಹೆಗಡೆ, ಬಿ.ಕಾಂ., ಎಲ್‌ಎಲ್.ಬಿ.,(ಸ್ಪೆಷಲ್), ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು(ಎನ್‌ಡಿಪಿಎಸ್), ದಾವಣಗೆರೆ ಆದ ನಾನು, ಈ ಕೆಳಕಂಡ ಆರೋಪಿತರಾದಃ-

1. ರಮೇಶ್ ಹೆಚ್ ತಂದೆ ಹನುಮಂತಪ್ಪ, ವಯಸ್ಸುಃ 32 ವರ್ಷ, ವೃತ್ತಿಃ ಕೂಲಿಕೆಲಸ, ವಾಸಃ ಹೊನ್ನೂರವಡ್ಡರಹಟ್ಟಿ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.
2. ಮುದೇನೂರ ಬಸವರಾಜಪ್ಪ ತಂದೆ ಲೇಟ್ ರಾಮಚಂದ್ರಪ್ಪ, ವಯಸ್ಸುಃ 38 ವರ್ಷ, ವೃತ್ತಿಃ ವ್ಯವಸಾಯ, ವಾಸಃ ಹರಗನಹಳ್ಳಿ ಗ್ರಾಮ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ.

ನಿಮ್ಮನ್ನು ಈ ಕೆಳಕಂಡಂತೆ ದೋಷಾರೋಪಿಸುತ್ತೇನೆಃ-

ದಿನಾಂಕ 05.11.2019 ರಂದು ಬೆಳಗ್ಗೆ ಸುಮಾರು 09.00 ಗಂಟೆ ಸಮಯದಲ್ಲಿ 1 ನೇ ಆರೋಪಿತನಾದ ನೀನು ದಾವಣಗೆರೆ ವಿದ್ಯಾನಗರ ಪೋಲೀಸ್ ಠಾಣೆ ವ್ಯಾಪ್ತಿಯ ಬಿ.ಐ.ಇ.ಟಿ. ಕಾಲೇಜ್ ಹಾಸ್ಟೇಲ್ ಮುಂಭಾಗದ ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿರುವ ನೂತನ ಕಾಲೇಜ್ ರಸ್ತೆಯ ಪಕ್ಕದ 3 ನೇ ಮೇನ್ ರಸ್ತೆಯ ಹತ್ತಿರ 150 ಗ್ರಾಂ ತೂಕದ ಗಾಂಜಾ ಪಾಲಿಥಿನ್ ಪ್ಲಾಸ್ಟರ್ ಕವರಗಳಲ್ಲಿ ಅಕ್ರಮವಾಗಿ ಗಾಂಜಾ ಮಾರಾಟ ಮಾಡುತ್ತಿದ್ದು, 2 ನೇ ಆರೋಪಿತನಾದ ನೀನು ಹೊನ್ನಾಳಿ ತಾಲ್ಲೂಕು, ಹರಗನಹಳ್ಳಿ ಗ್ರಾಮದಲ್ಲಿರುವ ಸರ್ವೇ

ನಂ.23/4 ಜಮೀನಿನಲ್ಲಿ ಸೇವಂತಿಗೆ ಹೂವಿನ ಮಧ್ಯೆ ಗಾಂಜಾ ಗಿಡಗಳನ್ನು ಅಕ್ರಮವಾಗಿ ಯಾವುದೇ ಪರವಾನಿಗೆಯನ್ನು ಪಡೆಯದೇ ಬೆಳೆದಿದ್ದು, ಮತ್ತು 1 ನೇ ಆರೋಪಿತನಿಗೆ ಅನಧೀಕೃತವಾಗಿ ಮಾರಾಟ ಮಾಡಿಕೊಂಡು ಬರಲು ಕೊಟ್ಟಿದ್ದು, 1 ನೇ ಆರೋಪಿತನಾದ ನೀನು ಅಕ್ರಮವಾಗಿ ಕಾಲೇಜು ವಿದ್ಯಾರ್ಥಿಗಳಿಗೆ ಮತ್ತು ಸಾರ್ವಜನಿಕರಿಗೆ ಮಾರಾಟ ಮಾಡುವ ಉದ್ದೇಶದಿಂದ ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿರುವ ನೂತನ ಕಾಲೇಜ್ ರಸ್ತೆಯ ಪಕ್ಕದ 3 ನೇ ಮೇನ್ ರಸ್ತೆಯ ಹತ್ತಿರ ನಿಂತಿದ್ದು, ಆರೋಪಿತರಾದ ನೀವು ಅಕ್ರಮವಾಗಿ ಗಾಂಜಾವನ್ನು ಸಾರ್ವಜನಿಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಮಾರಾಟ ಮಾಡುವ ಉದ್ದೇಶದಿಂದ ಮೇಲೆ ಹೇಳಿದ ಗಾಂಜಾವನ್ನು ಅಕ್ರಮವಾಗಿ ಬೆಳೆದು, ಸಂಗ್ರಹಿಸಿ ಇಟ್ಟುಕೊಂಡು ಮಾರಾಟ ಮಾಡುತ್ತಿದ್ದು, ಈ ಮೂಲಕ ಎನ್.ಡಿ.ಪಿ.ಎಸ್. ಕಾಯ್ದೆ ಕಲಂ 20(a), 20(b)(ii)(A) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ಸತ್ರ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

ಆರೋಪಿತರಾದ ನೀವು ಮೇಲೆ ಹೇಳಿದ ಆರೋಪಗಳಿಗೆ ವಿಚಾರಣೆಗೆ ಗುರಿಯಾಗಬೇಕೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 26 ನೇ ದಿವಸ ಸೆಪ್ಟಂಬರ್ ಮಾಹೆಯ 2022 ನೇ ಇಸವಿಯಂದು.

**(ರಾಜೇಶ್ವರಿ ಎನ್. ಹೆಗಡೆ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಆರೋಪಿಃ ರಮೇಶ್ ಹೆಚ್.

**<u>ಆರೋಪಿಯ ಆಪಾದನೆ</u>**

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ:

(ದಿನಾಂಕ 26 ನೇ ದಿವಸ ಸೆಪ್ಟಂಬರ್ ಮಾಹೆಯ 2022 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

***(ರಾಜೇಶ್ವರಿ ಎನ್. ಹೆಗಡೆ)***
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

2 ನೇ ಆರೋಪಿಃ ಮುದೇನೂರು ಬಸವರಾಜಪ್ಪ.

**<u>ಆರೋಪಿಯ ಆಪಾದನೆ</u>**

ಪ್ರಶ್ನೆ ೧: ನಿಮಗೆ ಈಗ ಓದಿ ವಿವರಿಸಿ ಹೇಳಲಾದ ದೋಷಾರೋಪಣೆ ಅರ್ಥವಾಯಿತೇ?
ಉತ್ತರ:

ಪ್ರಶ್ನೆ ೨: ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಲು ಬಯಸುವಿರಾ?
ಉತ್ತರ:

(ದಿನಾಂಕ 26 ನೇ ದಿವಸ ಸೆಪ್ಟಂಬರ್ ಮಾಹೆಯ 2022 ರಂದು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ದೋಷಾರೋಪಣೆಯನ್ನು ಓದಿ ಹೇಳಿ ನಂತರ ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಳ್ಳಲಾಯಿತು).

***(ರಾಜೇಶ್ವರಿ ಎನ್. ಹೆಗಡೆ)***
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.